# ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ, ಆಯುಕ್ತರ ಕಛೇರಿ ಧಾರವಾಡ

ಸಂಖ್ಯೆ:ಜಿ8(1)/ಖಾಶಿಅ/ಹೊಪ್ರಾಶಾ/ಅನು/25/2009-10 4061 ದಿನಾಂಕ: 06-01-2011

**ನಮೂನೆ-2**

**(ನಿಯಮ 3 ಉಪನಿಯಮ 5 (ಬಿ))**

ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ತಾ :ಹುನಗುಂದ ಜಿ.ಬಾಗಲಕೋಟ ಈ ಸ್ಥಳಿಯ ಮಂಡಳಿಯವರಿಗೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 30-31 ರಂತೆ ಹಾಗೂ ಅದರಡಿ ರಚಿಸಲಾದ ನಿಯಮಗಳಂತೆ ಇಂದು ದಿನಾಂಕ :04-01-2011 ಬಸವನಬಾಗೇವಾಡಿ ಇಲ್ಲಿಯ ಸರ್ವೆನಂ.333 ಇಲ್ಲಿ ಈ ಕೆಳಗೆ ನಮೂದಿಸಿರುವ ಶಿಕ್ಷಣ ಸಂಸ್ಥೆಯನ್ನು ನಡೆಸಲು ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

| | ಕ್ರಮ ಸಂಖ್ಯೆ : | 201/57 2010-2011 |
|---|---|---|
| 1 | ಪ್ರೌಢ ಶಾಲೆಯ ಹೆಸರು : | ಬಸವೇಶ್ವರ ದೇವಸ್ಥಾನ ಆಂಗ್ಲ ಮಾಧ್ಯಮ ಶಾಲೆ ಬಸವನಬಾಗೇವಾಡಿ ಜಿಲ್ಲಾ; ಬಿಜಾಪೂರ |
| 2 | ಶಿಕ್ಷಣದ ವರ್ಗೀಕರಣ | ಪ್ರಾಥಮಿಕ ಶಿಕ್ಷಣ (ಸಹ ಶಿಕ್ಷಣ) |
| 3 | ಅನುಮತಿ ನೀಡಿದ ತರಗತಿ : | 6 ನೇ ತರಗತಿ : 2010-11 ನೇ ಸಾಲಿನಲ್ಲಿ.<br>7 ನೇ ತರಗತಿ : 2011-12 ನೇ ಸಾಲಿನಲ್ಲಿ. |
| 4 | ಅನುಮತಿ ನೀಡಿದ ಮಾಧ್ಯಮ : | ಆಂಗ್ಲ ಮಾದ್ಯಮ |

**ಸದರ ಸಂಸ್ಥೆಯ ಬಸವತತ್ವ ಆಂಗ್ಲ ಮಾಧ್ಯಮ ಶಾಲೆ ಬಸವನಬಾಗೇವಾಡಿ ಜಿಲ್ಲಾ:ಬಿಜಾಪೂರ ನೋಂದಣಿ ಸಂಖ್ಯೆ 163/21 ರಂತೆ ನೋಂದಣಿ ಮಾಡಿ ಅನುಮತಿ ನೀಡಿದ ಆದೇಶವನ್ನು ರಹಿತ ಪಡಿಸಿದೆ. ಹಾಗೂ ಸದರ ಶಾಲೆಯ ಹೆಸರನ್ನು ಬಸವೇಶ್ವರ ದೇವಸ್ಥಾನ ಆಂಗ್ಲ ಮಾಧ್ಯಮ ಶಾಲೆ ಬಸವನಬಾಗೇವಾಡಿ ಜಿಲ್ಲಾ:ಬಿಜಾಪೂರ ಎಂದು ತಿದ್ದುಪಡಿ ಮಾಡಿ ಪರಿಷ್ಕೃತ ನೋಂದಣಿ ಪತ್ರವನ್ನು ಈ ಮೂಲಕ ನೀಡಲಾಗಿದೆ.**

ಸದರಿ ಶಿಕ್ಷಣ ಸಂಸ್ಥೆಯನ್ನು ಕ್ರಮ ಸಂಖ್ಯೆ201/57 2010-11 ಪುಟ ಸಂಖ್ಯೆ: 79 ರಲ್ಲಿ ಈ ಕಛೇರಿಯಲ್ಲಿನ ಶೈಕ್ಷಣಿಕ ಸಂಸ್ಥೆಗಳ ನೋಂದಣಿ ವಹಿಯಲ್ಲಿ ನೋಂದಾಯಿಸಲಾಗಿದೆ. ಈ ಪ್ರಮಾಣ ಪತ್ರವನ್ನು ಕರ್ನಾಟಕ ಶಿಕ್ಷಣ ಮಸೂದೆ 1983 ರಡಿ ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲಾಗಿದೆ.

1. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ವರ್ಗೀಕರಣ ಹಾಗೂ ನೋಂದಣಿ) ನಿಯಮಗಳು, 1997 ರ ನಿಯಮ 3, 4 ಮತ್ತು 5 ಕ್ಕೆ ಒಳಪಟ್ಟಿರುತ್ತದೆ.
2. ಸಂಸ್ಥೆಯ ಆಡಳಿತ ಮಂಡಳಿಯು ಮೇಲೆ ತಿಳಿಸಿರುವ ನಿಯಮಗಳಂತೆ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
3. ಶಾಲಾ ನಿವೇಶನ, ವಿಸ್ತೀರ್ಣ, ಕಟ್ಟಡ, ಪಾಠೋಪಕರಣ, ಪೀಠೋಪಕರಣಗಳು, ಸಿಬ್ಬಂದಿ ವರ್ಗಕ್ಕೆ ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
4. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂದರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
5. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ, ಅದೇ ಸರ್ವೇ ನಂಬರ್‌ನಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.
6. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿ ನಡೆಸತಕ್ಕದ್ದು.
7. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗ್ಗೆ ಹೊರಡಿಸುವ ಎಲ್ಲ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 (ಕರ್ನಾಟಕ ಆ್ಯಕ್ಟ ಸಂಖ್ಯೆ: 1:95) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.

8. ಈ ಪ್ರೌಢ ಶಾಲೆ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂಖ್ಯೆ: ಇಡಿ:175:ಪಿ.ಎಂ.ಸಿ:95, ದಿನಾಂಕ: 7-9-98 ಮತ್ತು ದಿನಾಂಕ: 29-12-98 ರ ಪ್ರಕಾರ **ಶಾಶ್ವತ ಅನುದಾನರಹಿತವಾಗಿರುತ್ತದೆ.**
9. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ.20-00 ಛಾಪಾ ಕಾಗದದಲ್ಲಿ ನೋಟರಿಯವರ ಮುಂದೆ ಪ್ರಮಾಣಿಕರಿಸಿದ ಒಪ್ಪಿಗೆ ಪತ್ರವನ್ನು ನೀಡುವುದು.
10. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳ (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ 1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
11. ಇಲಾಖೆ ಹಾಗೂ ಸರ್ಕಾರ ನಿಗದಿ ಪಡಿಸಿದ ಪಠ್ಯಪುಸ್ತಕ, ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸತಕ್ಕದ್ದು.
12. ಶಾಲೆ ಪ್ರಾರಂಭಿಸಿದ ಎರಡು ತಿಂಗಳ ಅವಧಿಯೊಳಗೆ ಪ್ರಥಮ ಮಾನ್ಯತೆಗೆ ಸಂಬಂಧಿಸಿದ ಪ್ರಸ್ತಾವನೆ ಉಪನಿರ್ದೇಶಕರಿಗೆ ಸಲ್ಲಿಸಿ ಅನುಮೋದನೆ ಪಡೆಯ ತಕ್ಕದ್ದು.
13. ನೋಂದಣಿ ಪ್ರಸ್ತಾವನೆಯೊಡನೆ ಸಲ್ಲಿಸಿದ ದಾಖಲೆಗಳು ಸತ್ಯಕ್ಕೆ ದೂರವಾದದ್ದೆಂದು ಯಾವುದೇ ಸಂದರ್ಭದಲ್ಲಿ ಕಂಡು ಬಂದಲ್ಲಿ ಈ ನೋಂದಣಿ ರದ್ದುಪಡಿಸಲಾಗುವುದು.
14. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಕಾರ್ಯದರ್ಶಿಗಳ ಜಂಟಿ ಖಾತೆಯಲ್ಲಿ ಇಡತಕ್ಕದ್ದು.
15. ಅನುಮತಿ ನೀಡಿದ ಪ್ರತಿಯೊಂದು ತರಗತಿಯಲ್ಲಿ ಮಕ್ಕಳ ಹಾಗೂ ಶಿಕ್ಷಕರ ಅನುಪಾತವನ್ನು ನಿಯಮಾನುಸಾರ ಇರತಕ್ಕದ್ದು. ಪ್ರತಿ ತರಗತಿಯಲ್ಲಿ ದಾಖಲಾತಿ 30 ಹಾಗೂ ಹಾಜರಾತಿ ಕನಿಷ್ಠ 25 ಇರತಕ್ಕದ್ದು.
16. ಕರ್ನಾಟಕ ಶಿಕ್ಷಣ ಮಸೂದೆ ಅನುಚ್ಛೇದ 8 ರ ಅಡಿಯಲ್ಲಿ ಉಪಬಂಧ 36-39 ರಂತೆ ನೋಂದಾಯಿಸಿದ ಎಲ್ಲ ಶಾಲೆಗಳು ರೆಕಗ್ನೇಷನ್ ಹಾಗೂ ಪ್ರಾವಿಜನಲ್ ರೆಕಗ್ನೇಷನ್ ವ್ಯಾಪ್ತಿಗೆ ಬರುವುದು.
17. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.
18. ಕರ್ನಾಟಕ ಶಿಕ್ಷಣ ಮಸೂದೆ ನಿಯಮಗಳ ಪ್ರಕಾರ ಶಾಲೆಗೆ ಬೇಕಾದ ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ ಪುಸ್ತಕಗಳು ಆಟದ ಮೈದಾನ ಶಾಲಾ ಕಟ್ಟಡ ಮುಂತಾದ ಸೌಲಭ್ಯಗಳನ್ನು ಕೂಡಲೇ ಒದಗಿಸಿಕೊಳ್ಳತಕ್ಕದ್ದು. ಇಲ್ಲದಿದ್ದಲ್ಲಿ ನೋಂದಣಿಯನ್ನು ರದ್ದುಗೊಳಿಸಲಾಗುವುದು.
19. ಶಾಲಾ ಕೆಲಸದ ವೇಳೆ ಮತ್ತು ದಿನಗಳನ್ನು ಇಲಾಖೆಯ ನಿಯಮಗಳಂತೆ ಪಾಲಿಸತಕ್ಕದ್ದು.
20. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಎರಡುತಿಂಗಳ ಒಳಗಾಗಿ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಯಾವುದೇ ಷರತ್ತುಗಳನ್ನು ಪಾಲಿಸದಿದ್ದಲ್ಲಿ ಈ ಆದೇಶ ತಾನಾಗಿ ರದ್ದಾಗುವುದು.
21. ಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ಶೌಚಾಲಯದ ವ್ಯವಸ್ಥೆಯನ್ನು ಕಡ್ಡಾಯವಾಗಿ ಒದಗಿಸಬೇಕು ಮತ್ತು ಕುಡಿಯುವ ನೀರಿನ ವ್ಯವಸ್ಥೆಯನ್ನು ಒದಗಿಸಬೇಕು.
22. **ಶಾಲೆಯ ಕಟ್ಟಡ ಸುರಕ್ಷತೆಯ ಬಗ್ಗೆ, ಬೆಂಕಿ, ಬಿರುಗಾಳಿ, ವಿದ್ಯುತ್ ಅಪಘಾತ ಮುತಾಂದ ಅವಘಡಗಳಿಂದ ಸುರಕ್ಷಿತವಾಗಿರತಕ್ಕದ್ದು. ಮತ್ತು ನ್ಯಾಶನಲ್ ಬಿಲ್ಡಿಂಗ್ ಕೋಡ್ ಆಫ್ ಇಂಡಿಯಾ 2005 ರ ಪ್ರಕಾರ ಶಾಲಾ ಕಟ್ಟಡಗಳಲ್ಲಿ ಜಾಗೃತಿ ಕ್ರಮಗಳನ್ನು ತೆಗೆದುಕೊಳ್ಳಬೇಕು.**
23. **ಶಾಲೆಗಳಲ್ಲಿ ಅಗ್ನಿಶಾಮಕ ಯಂತ್ರ ಅಳವಡಿಸಿ ಎಲ್ಲ ಶಿಕ್ಷಕರಿಗೆ ಮತ್ತು ಇತರ ಸಿಬ್ಬಂದಿಗೆ ಅದರ ಉಪಯೊಗದ ಬಗ್ಗೆ ತರಬೇತಿ ನೀಡುವದು**
24. ಶಾಲೆಯಲ್ಲಿ ನೇಮಕ ಮಾಡಿಕೊಳ್ಳುವ ಪ್ರತಿಯೊಬ್ಬ ಬೋಧಕ / ಸಿಬ್ಬಂದಿಗೂ ಕರ್ನಾಟಕ ನಾಗರಿಕ ಸೇವಾ ನಿಯಮದ ಪ್ರಕಾರ ಸೇವಾ ಪುಸ್ತಕ ತೆರೆದು ಅದರಲ್ಲಿ ಅವರ ಸೇವಾ ವಿವರಗಳನ್ನು ನಿಯಮಾನುಸಾರ ದಾಖಲಿಸಿ ನಿರ್ವಹಿಸುವುದು.
25. ಸಿಬಂದಿ ಮಾದರಿ ರಚನೆಯ ಪ್ರಕಾರ ಬೋಧಕ / ಬೋಧಕೇತರ ಸಿಬ್ಬಂದಿಗಳನ್ನು ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಅನುದಾನ ಇಲ್ಲದ ಪ್ರಾಥಮಿಕ ಮತ್ತು ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ರನ್ವಯ ದೊರಕಿಸಬೇಕಾದ ಎಲ್ಲ ಸೇವಾ ಸೌಲಭ್ಯಗಳನ್ನು ಸಿಬ್ಬಂದಿಗಳಿಗೆ ಲಭ್ಯವಾಗುವಂತೆ ಮಾಡತಕ್ಕದ್ದು.
26. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ಹಾಗೂ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳ ಪ್ರಕಾರ ಶಾಲಾ ಶಿಕ್ಷಕರಿಗೆ ಸೇವಾ ಭದ್ರತೆ ಒದಗಿಸುವುದು, ಶಿಕ್ಷಕರ

ಸೇವಾ ಪುಸ್ತಕ ನಿರ್ವಹಣೆ ಮಾಡುವುದು ಹಾಗೂ ನೇಮಕ ಮಾಡಿಕೊಂಡ ಶಿಕ್ಷಕರಿಗೆ ಕನಿಷ್ಠ ವೇತನವನ್ನು ಬ್ಯಾಂಕ ಮೂಲಕ ಪಾವತಿಸತಕದ್ದು

27. ಸರಕಾರದ ಆದೇಶ ಸಂಖ್ಯೆ: ಇಡಿ 104 ಎಸ್ ಇ ಪಿ 2005 ದಿನಾಂಕ:12-01-2006 ರಂತೆ ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ನಿಗದಿಪಡಿಸಲಾದ ವಿದ್ಯಾರ್ಹತೆಯಂತೆ, ಅನುದಾನರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿನ ಹುದ್ದೆಗಳಿಗೂ ಕಡ್ಡಾಯವಾಗಿ ತರಬೇತಿ ಹೊಂದಿದ ಹಾಗೂ ಇಲಾಖೆಯ ನಿಯಮಗಳ ಪ್ರಕಾರ ಅರ್ಹ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಕ ಮಾಡತಕ್ಕದ್ದು.
28. **ನಿಯಮಾನುಸಾರ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಆಂಗ್ಲ ಮಾಧ್ಯಮದಲ್ಲಿ ಅಧ್ಯಯನ ಮಾಡಿದ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದಲ್ಲಿ ಮಾತ್ರ ಶಾಲೆಯನ್ನು ಪ್ರಾರಂಭಿಸತಕ್ಕದ್ದು.**
29. ಪ್ರಾರಂಭಿಸಲು ಉದ್ದೇಶಿಸಿರುವ ಶಾಲೆಯು ಬಾಡಿಗೆ ಕಟ್ಟಡ ಹೊಂದಿದ್ದಲ್ಲಿ, ಶಾಲೆ ಪ್ರಾರಂಭಿಸಲು ಉದ್ದೇಶಿಸಿರುವ ಶಾಲಾ ಕಟ್ಟಡ ಹಾಗೂ ಮೂಲಭೂತ ಸೌಕರ್ಯಗಳು ತೃಪ್ತಿಕರವಾಗಿರುವ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ದೃಢೀಕರಣ ಪಡೆದು ಶಾಲೆ ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವುದು.
30. ಆಡಳಿತ ಮಂಡಳಿಯು ರೂ, 5 ಲಕ್ಷ ನಗದು ಠೇವಣಿ ಅಥವಾ ಸಮ ಮೊತ್ತದ ಸ್ಥಿರಾಸ್ತಿಯನ್ನು ಹೊಂದಿರತಕ್ಕದ್ದು.
31. ಪ್ರತಿ ಶಿಕ್ಷಣ ಸಂಸ್ಥೆ ಪ್ರತಿ ವರ್ಷ ಚಾರ್ಟರ್ಡ ಅಕೌಂಟೆಂಟ್‌ರಿಂದ ಪ್ರಮಾಣೀಕೃತ ಲೆಕ್ಕ ಪತ್ರಗಳನ್ನು ಹೊಂದಿರತಕ್ಕದ್ದು.
32. ಶಾಲೆಯು ವಿದ್ಯಾರ್ಥಿಗಳ ಪ್ರವೇಶಗಳ ನಿಬಂಧನೆಗಳು ಮತ್ತು ವಿದ್ಯಾರ್ಥಿಗಳ ಶುಲ್ಕ ವಸೂಲಾತಿ ಈ ಬಗ್ಗೆ ಇರುವ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
33. ಶಾಲೆ ಮತ್ತು ಶಾಲಾ ಆವರಣ, ಶಾಲೆಗಳಲ್ಲಿಯ ಮಕ್ಕಳ ಪ್ರವೇಶ ದಾಖಲಾತಿಗಳು ಎಲ್ಲರಿಗೂ ಮುಕ್ತವಾಗಿರತಕ್ಕದ್ದು.
34. ಶಾಲಾ ಕಟ್ಟಡವು ಪರೀಕ್ಷೆಗಳು, ತರಬೇತಿ, ಜನಗಣತಿ ಇತ್ಯಾದಿ ಇಲಾಖಾ ಕಾರ್ಯಗಳಿಗೆ ಲಭ್ಯವಾಗಿರತಕ್ಕದ್ದು.
35. ಕರ್ನಾಟಕ ಶಿಕ್ಷಣ ಸಂಸ್ಥೆಗಳು [ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮಣ] ನಿಯಮಗಳು 1995 ರಲ್ಲಿ ತಿಳಿಸಿರುವ ಎಲ್ಲಾ ಸೌಲಭ್ಯಗಳನ್ನು ಒದಗಿಸತಕ್ಕದ್ದು.
36. ಈ ಎಲ್ಲಾ ನಿಬಂಧನೆಗಳನ್ನು ಎರಡು ತಿಂಗಳೊಳಗಾಗಿ ಪೂರೈಸಿ ಮಾನ್ಯತೆ ಕುರಿತು ಅರ್ಜಿಯನ್ನು ಸಲ್ಲಿಸತಕ್ಕದ್ದು.
37. ಇದು ಪರಿಷ್ಕೃತ ನೋಂದಣಿ ಆಗಿದ್ದು ಮೂಲ ನೋಂದಣಿ ಪತ್ರವನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಬೇಕು.

**ಅಪರ ಆಯುಕ್ತರು,**
**ಸಾರ್ವಜನಿಕ ಶಿಕ್ಷಣ ಇಲಾಖೆ,**
**ಧಾರವಾಡ.**

ಸ್ಥಳ : ಧಾರವಾಡ
ದಿನಾಂಕ : 06-01-2011

ಗೆ,

1. ಆಯುಕ್ತರು, ಕೂಡಲಸಂಗಮ ಅಭಿವೃದ್ಧಿ ಮಂಡಳಿ ಕೂಡಲಸಂಗಮ ತಾ :ಹುನಗುಂದ ಜಿ.ಬಾಗಲಕೋಟ.
2. ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬಿಜಾಪೂರ
3. ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬಿಜಾಪೂರ
4. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಬಸವನಬಾಗೇವಾಡಿ.
5. ಕಛೇರಿ ಪ್ರತಿ